**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 05/12/2023 )**

**ಪಾಟೀ ಸವಾಲು : 22 ರಿಂದ 25 ಮತ್ತು 39 ನೇ ಪ್ರತಿವಾದಿಗಳ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ಈ ದಾವೆಯ ಎಲ್ಲಾ ಪ್ರತಿವಾದಿಗಳ ಪರಿಚಯ ನನಗೆ ಇರುತ್ತದೆ. ನನ್ನ ತಂದೆಯ ತಾಯಿಯ ಹೆಸರು ಅಂದರೆ ನನ್ನ ಅಜ್ಜ ಯ ಹೆಸರು ಹೊನ್ನಮ್ಮ ಕೋಂ ನಾರಾಯಣ ನಾಯ್ಕ. ದಾವಾ ಆಸ್ತಿ ಯು ಮೂಲತಃ ಹೊನ್ನಮ್ಮ ಕೋಂ ಗಿಡ್ಡಾ ನಾಯ್ಕ ಎಂಬುವವರಿಗೆ ಸೇರಿದ್ದಾಗಿತ್ತು. ಸದ್ರಿಯವರಿಗೆ ದಾವಾ ಆಸ್ತಿ ಯಾವ ದಾಖಲೆಯ ಆಧಾರದಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಹೊನ್ನಮ್ಮ ಕೋಂ ಗಿಡ್ಡಾ ನಾಯ್ಕ ರವರಿಗೆ ಸೇರಿದ್ದು ಎಂದು ನನಗೆ ಹುಟ್ಟಿದ್ದಾಗಿನಿಂದಲೂ



ಗೊತ್ತು. ಹೊನ್ನಮ್ಮ ಕೋಂ ಗಿಡ್ಡಾ ನಾಯ್ಕ ರವರ ಹೆಸರಿಗೆ ಆದೇಶ ಆಗಿರುತ್ತದೆ ಅದು ಯಾವುದೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿರುವ ಸರ್ವೇನಂಬರ್ 647 ರಲ್ಲಿ ಒಟ್ಟು ಮೂರು ಎಕರೆ ಮೂವತ್ತು ಗುಂಟೆ ಜಮೀನು ಇತ್ತು. ಸದ್ರಿ ಸರ್ವೇ ನಂಬರಿನ ಎಲ್ಲಾ ಕ್ಷೇತ್ರವನ್ನು ಸೇರಿಸಿ ದಾವೆ ದಾಖಲಿಸಿರುತ್ತೇವೆ.

2. ಈ ಪ್ರಕರಣಕ್ಕೆ ಪೂರ್ವದಲ್ಲಿ ಇದೇ ನ್ಯಾಯಾಲಯದಲ್ಲಿ 1 ರಿಂದ 3 ನೇ ಪ್ರತಿವಾದಿ ಮತ್ತು 22 ರಿಂದ 39 ನೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಾಲು ಪಟ್ಟಿ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದ್ರಿ ಪ್ರಕರಣದ ಸಂಖ್ಯೆ: ಒ.ಎಸ್ ನಂಬರ್ 143/2014 ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ನನ್ನ ತಂದೆ ಕುಪ್ಪಾ ನಾರಾಯಣ ನಾಯ್ಕರವರು ತನ್ನನ್ನು ಸಹ ಪ್ರತಿವಾದಿಯಾಗಿ ಸೇರಿಸಿಕೊಳ್ಳಬೇಕೆಂದು ಅರ್ಜಿ ಸಲ್ಲಿಸಿದ್ದರೆಂದರೆ ಸರಿ. ಸದ್ರಿ ಅರ್ಜಿಯನ್ನು ನ್ಯಾಯಾಲಯ ನನ್ನ ತಂದೆಗೆ ಯಾವುದೇ ಹಕ್ಕು ಆಸ್ತಿಯಲ್ಲಿ ಇಲ್ಲವೆಂದು ಅರ್ಜಿಯನ್ನು ತಿರಸ್ಕರಿಸಿರುತ್ತಾರೆಂದರೆ ಹೌದು. ಸದ್ರಿ ಅರ್ಜಿಯ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಆದರೆ ಈ ದಾವೆ ದಾಖಲಿಸಿರುತ್ತೇವೆ.

3. ವಾದಿಗಳಾದ ನಾವು ಮತ್ತು 4 ರಿಂದ 21 ನೇ ಪ್ರತಿವಾದಿಯವರು ದೊಡ್ಡ ಬಲ್ಸೆರ್ ಮನೆಯ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿ ಮತ್ತು 22 ರಿಂದ 39 ನೇ ಪ್ರತಿವಾದಿಯವರು ಪಾಲುಪಟ್ಟಿ ಮಾಡಿಕೊಂಡು ಅವರವರ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಈ ಮೇಲೆ ಹೇಳಿದಂತೆ ಒಸ್ ಸಂಖ್ಯೆ: 143/2014 ಪ್ರಕರಣದಲ್ಲಿ ಸಲ್ಲಿಸಿದ ಅರ್ಜಿ ವಜಾ ಆದ ನಂತರ ದಾವಾ ಆಸ್ತಿ ಯಲ್ಲಿ ಪಾಲು ಬೇಕೆಂದು 1 ನೇ ಪ್ರತಿವಾದಿಯ ಬಳಿ ಕೇಳಿರುತ್ತೇವೆ. ವಾದ ಪತ್ರದ ಜೊತೆಗೆ ಹಾಜರುಪಡಿಸಿರುವಂತಹ ವಂಶಾವಳಿಯಲ್ಲಿ 1 ರಿಂದ 3 ನೇ ಪ್ರತಿವಾದಿ ಮತ್ತು 22 ರಿಂದ 39 ನೇ ಪ್ರತಿವಾದಿಗಳನ್ನು ವಾದಿಗಳಾದ ನಮಗೆ ಯಾವ ರೀತಿ ಸಂಬಂಧ ಎಂದು ತೋರಿಸಿರುವುದಿಲ್ಲವೆಂದರೆ ಸರಿ. ಸದ್ರಿಯವರು ನಮಗೆ ಸಂಬಂಧಿಕರಲ್ಲದೇ ಇದ್ದ ಕಾರಣ ಅವರನ್ನು ವಂಶಾವಳಿಯಲ್ಲಿ ಕಾಣಿಸಲಿಲ್ಲ ಎಂದರೆ ಸರಿಯಲ್ಲ.

4. ನಿಪಿ–15 ಆದೇಶದಂತೆ ದಾವಾ ಆಸ್ತಿಯು ದುರ್ಗಮ್ಮ ಕೊಂ ಬಲೀಂದ್ರ ಎಂಬುವವರಿಗೆ ಮಂಜೂರಾಗಿದೆ ಎಂದರೆ ಸರಿ. ನಿಪಿ–16 ರಂತೆ ದಾವಾ ಆಸ್ತಿಯು ದುರ್ಗಮ್ಮ ಕೊಂ ಬಲೀಂದ್ರ ಎಂಬುವವರಿಗೆ ಮಂಜೂರಾಗಿದೆ ಎಂದರೆ ಸರಿ. ನಿಪಿ–18 ತೊಂಡಿ ವಾಂಟಣೆಯಲ್ಲಿ ವಾದಿ ಮತ್ತು



ಪ್ರತಿವಾದಿ 4 ರಿಂದ 21 ನೇಯವರ ಕುಟುಂಬದವರ ಹೆಸರು ಇಲ್ಲವೆಂದರೆ ಸರಿ. ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ದಾವೆ ಹಾಕಿ ದುರ್ಲಾಭ ಮಾಡುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಹೇಳಿರುವಂತೆ ಅವಿಭಕ್ತ ಕುಟುಂಬದ ಸದಸ್ಯರಾಗಿ ಪ್ರತಿವರ್ಷ ತುಳಸಿ ಪೂಜೆ, ದೇವರ ಕಾರ್ಯಗಳನ್ನು ಒಟ್ಟಿಗೆ ಮಾಡುತ್ತಾ ಬಂದದ್ದೇವೆ ಎಂದು ಸುಳ್ಳು ಹೇಳಿರುತ್ತೇವೆ ಎಂದರೆ ಸಾಕ್ಷಿಯು ಆ ರೀತಿ ದೇವರ ಕಾರ್ಯದ ಬಗ್ಗೆ ವಾದಪತ್ರದಲ್ಲಿ ಹೇಳಿರುವುದಿಲ್ಲವೆಂದು ನುಡಿದಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು ಮತ್ತು 22 ರಿಂದ 39 ನೇ ಪ್ರತಿವಾದಿಗಳು ಪ್ರತ್ಯೇಕ ತುಳಸಿ ಕಟ್ಟೆಯನ್ನು ಹೊಂದಿದ್ದರು ಎಂದರೆ ಸರಿ.ಹಾಗೆ ನಮ್ಮ ತುಳಸಿ ಕಟ್ಟೆ ಪ್ರತ್ಯೇಕವಾಗಿತ್ತು ಎಂದರೆ ಸರಿ. ಆ ರೀತಿ ಪ್ರತ್ಯೇಕವಾದ ತುಳಸಿ ಕಟ್ಟೆಗಳು ಮೊದಲಿನಿಂದಲೂ ಇತ್ತು.

5. ವಾದಿಗಳಾದ ನಮಗೆ ಮತ್ತು 4 ರಿಂದ 21 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಹಕ್ಕು ಇದೆ ಎಂದು ಸಾಧಿಸುತ್ತಾ ಬಂದಿರುತ್ತೇವೆ ಎಂದರೆ

ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಾಣಿಸಿದ 9 ರಿಂದ 12 ನೇ ಆಸ್ತಿಗಳು ದುರ್ಗಮ್ಮ ಕೋಂ ಬಲೀಂದ್ರ ನಾಯ್ಕ ರವರಿಗೆ ರೈತನಾತೆಯಿಂದ ಭೂನ್ಯಾಯ ಮಂಡಳಿಯಿಂದ ಬಂದ ಆಸ್ತಿ ಎಂದರೆ ಸರಿ. ಅವರ

ಸಾಗುವಳಿ ಭೂಮಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿ.

**ಪಾಟೀ ಸವಾಲು ಮಾಡಲು 32 ಪರ ವಕೀಲರು ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**